# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು
## MVC. No.868/2022

ಪಿ.ಡಬ್ಲ್ಯು. 1

ದಿನಾಂಕಃ **10.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ. ಕೆ.ವಿ.ಎಸ್.ಕೆ. ವಕೀಲರಿಂದ**

ನಮ್ಮ ಬಸ್ ಶಿರಾಯಿಂದ ಬೆಂಗಳೂರಿಗೆ ಹೋಗುತ್ತಿತ್ತು. ಲಾರಿ ಬಲ ಬದಿಗೆ ಹೋಗಿ ಸಡನ್ ಆಗಿ ಎಡ ಬದಿಗೆ ಬಂದು ಬಸ್ ಗೆ ಡಿಕ್ಕಿ ಹೊಡೆಯಿತು. ನಾನು ಅಪಘಾತ ನೋಡಿರುವುದಿಲ್ಲ. ತುಮಕೂರಿಗೆ ಬೆಂಗಳೂರಿಗೆ 4 ರಸ್ತೆ ಇದ್ದು ಮದ್ಯದಲ್ಲಿ ಡಿವೈಡರ್ ಇರುತ್ತದೆ. ಲಾರಿ ನಮ್ಮ ಬಸ್ ನ ಪಕ್ಕ ಬರುತ್ತಿತ್ತು. ಒಂದೊಂದು ಬದಿದಲ್ಲಿ 2 ಬಸ್ ಹೋಗಬಹುದು, ಅದರ ಜೊತೆ ದ್ವಿ ಚಕ್ರ ವಾಹನವು ಹೋಗಬಹುದು. ರಸ್ತೆ ದೊಡ್ಡದಾಗಿರುವುದರಿಂದ ಒಬ್ಬರಿಗೊಬ್ಬರು ಸಂಪರ್ಕ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಧಾನವಾಗಿ ಹೋಗುತ್ತಿದ್ದ ಲಾರಿಗೆ ನಮ್ಮ ಬಸ್ ವೇಗವಾಗಿ ಹೋಗಿ ಡಿಕ್ಕಿಪಡಿಸಿದೆ ಎಂದರೆ ಸರಿಯಲ್ಲ. ಯಾವುದೇ ಅಪಘಾತವಾದರೂ ಬಸ್ ನ ಡ್ರೈವರ್ ಮೇಲೆ ಚಾರ್ಜ್ ಶೀಟ್ ಹಾಕುತ್ತೇವೆ ಎಂದರೆ ಸಾಕ್ಷಿಯು ಚಾಲಕನ ತಪ್ಪಿದ್ದರೇ ಚಾರ್ಜ್ ಶೀಟ್ ಹಾಕುತ್ತೇವೆ ಅನ್ನುತ್ತಾರೆ. ಬಸ್ ನ ಚಾಲಕರ ಮೇಲೆ ಚಾರ್ಜ್ ಶೀಟ್ ಹಾಕಿಲ್ಲ. ಚಾಲಕರ ಮೇಲೆ ನಾವು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಅಪಘಾತವು ನಮ್ಮ ಬಸ್ ನ ಚಾಲಕನ ತಪ್ಪಿನಿಂದ ಆಗಿದ್ದರೂ ಸಹಾ ಲಾರಿ ಚಾಲಕನ ಮೇಲೆ ಸುಳ್ಳು ಕೇಸನ್ನು ಶಿಫಾರಸು ಮಾಡಿ ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. ಬಸ್‌ಗೆ ಸರ್ವೇ ಮಾಡಿಸಿರುವುದಿಲ್ಲ. ಬಸ್ ನ ಐ.ಎಂ.ವಿ ವರದಿಯನ್ನು ಆರ್.ಟಿ.ಓ ರವರು ಕೊಟ್ಟಿರುತ್ತಾರೆ. ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಅದರಲ್ಲಿ ಬಸ್ ಡ್ಯಾಮೇಜ್ ಅಗಿದೆ ಎಂದು ನಮೂದಿಸಿರುತ್ತಾರೆ. ಬಸ್ ನ ಡ್ಯಾಮೇಜ್ ಆದ ಬಗ್ಗೆ ಇಂಡೆಂಟ್ ನ್ನು ಕೊಟ್ಟಿರುತ್ತೇನೆ. ಅದಕ್ಕೆ ಸಂಬಂದಪಟ್ಟಂತೆ ಜಾಬ್ ಕಾರ್ಡ್ ನ್ನು ಕೊಟ್ಟಿರುತ್ತೇನೆ. ಬಸ್ ರಿಪೇರಿ ಮಾಡಲು **parts** ನ್ನು ಖರೀದಿ ಮಾಡಿದ್ದಕ್ಕೆ ಸಂಬಂದಪಟ್ಟಂತೆ ಜಾಬ್ ಕಾರ್ಡ್ ನ್ನು ಬಿಟ್ಟು ಬೇರೆ ದಾಖಲೆ ಹಾಕಿಲ್ಲ. **parts** ನ್ನು ಖರೀದಿಗೆ ಮತ್ತು ರಿಪೇರಿ ಮಾಡಿಸಲು 29 ಸಾವಿರ ಖರ್ಚಾಗಿರುತ್ತದೆ. ಬಸ್ ರಿಪೇರಿ ಮಾಡುವವರು ನಮ್ಮ ಇಲಾಖೆಯ ಖಾಯಂ ನೌಕರರು. ಅವರಿಗೆ ಸಂಬಳ ಕೊಡುತ್ತೇವೆ.

ಬಸ್ ರಿಪೇರಿ ಮಾಡಲು  ನೌಕರರಿಗೆ ಪ್ರತ್ಯೇಕವಾದ ಸಂಬಳ ಕೊಡುವುದಿಲ್ಲ. ಸುಳ್ಳು  ರಿಪೇರಿ ಚಾರ್ಜ್ ನ್ನು  ಕ್ಲೇಮ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ **parts** ಗಳನ್ನು ನಾವು ಕೊಂಡು ಕೊಂಡಿಲ್ಲ ಎಂದರೆ ಸರಿಯಲ್ಲ.  ಬಸ್ ನ  **inspection report** ನ್ನು ಹಾಕಿರುವುದಿಲ್ಲ.  ನಮ್ಮ ಬಸ್ ಗೆ ಯಾವುದೇ ಡ್ಯಾಮೇಜ್ ಆಗಿರುವುದಿಲ್ಲ ಯಾವುದೇ ರಿಪೇರಿ ಮಾಡಿಸಿರುವುದಿಲ್ಲ  ಎಂದರೆ  ಸರಿಯಲ್ಲ.  ಪರಿಹಾರಕೋಸ್ಕರ ಸುಳ್ಳು ಕೇಸನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ  ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

MVC. No. 781/2021

ಪಿ.ಡಬ್ಲ್ಯೂ. 1

ದಿನಾಂಕ:07.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಎದುರುದಾರರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು